# ಸಿರಿಯೆಂಬ ಐಸಿರಿ

ಪುರುಷನ ಹಿತಾಸಕ್ತಿಗೆ ಅನುಗುಣವಾಗಿ ರೂಪಿಸಲಾದ ನಿಯಮಾವಳಿಗಳು ಅವಳ ಬದುಕಿನಲ್ಲಿ ಸಹಿಸಿಕೊಳ್ಳಲಾರದ ನಿತ್ಯ ನೋಯಿಸುವ ದಂಡಾಧಿಕಾರಗಳಾಗಿವೆ. ಅವನಿಗಿಂತಲೂ ಕಾರ್ಯಕ್ಷಮತೆಯುಳ್ಳ, ಏಕಕಾಲದಲ್ಲಿ ಹಲವು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಅವಳ ವಿವೇಚನೆ, ಧಾರಣಾ ಸಾಮರ್ಥ್ಯ ಬೆರಗು ಮತ್ತು ಅಸಹನೆಯನ್ನು ಹುಟ್ಟಿಸುತ್ತದೆ. ಅಸಹನೆ, ಕಾಡುವ ಕೀಳರಿಮೆ ಯಾವುದೇ ವ್ಯಕ್ತಿಯನ್ನು ಕುಬ್ಜವಾಗಿಸುತ್ತದೆ.

ತುಳು ಸಂಸ್ಕೃತಿಯಲ್ಲಿನ ಪಾಡ್ದನಗಳು 'ಸಿರಿ'ಯ ಕತೆಯನ್ನು ಅಭಿಮಾನದಿಂದ ವರ್ಣಿಸುತ್ತವೆ. ಸಿರಿಯ ಪಾಡ್ದನ ಗತಕಾಲದಲ್ಲಿನ ಮಹಿಳೆಯೊಬ್ಬಳು ತನ್ನ ಆತ್ಮದ ಸತ್ಯ, ಸ್ವಾಭಿಮಾನಕ್ಕೆ ಒದಗಿದ ಧಕ್ಕೆಯ ವಿರುದ್ಧ ನಡೆಸಿದ ಹೋರಾಟದ ಕಥನ. ತುಳುನಾಡಿನ ಜನ ಬಹಳ ಅಭಿಮಾನದಿಂದ ಹೇಳಿಕೊಳ್ಳುವ ಕಥನವಿದಾಗಿದೆ. ಏಕೆಂದರೆ ಮೊದಲಬಾರಿಗೆ ಹೆಣ್ಣೊಬ್ಬಳು ಬದುಕಿನ ಸತ್ಯದ ಸ್ಥಾಪನೆಗೆ ನಡೆಸಿದ ಏಕಾಂಗಿ ಹೋರಾಟದ ಕಥನವಿದಾಗಿತ್ತು.

ಸತ್ಯನಾಪುರದ ಅರಮನೆಯ ಒಡೆಯ ಬೆರ್ಮ ಆಳ್ವನ ಒಬ್ಬಳೇ ಮಗಳು ಸಿರಿ. ಸಂತಾನವಿಲ್ಲದ ಬೆರ್ಮಾಳ್ವರನಿಗೆ ಕುಲಬೆರ್ಮ ದೇವರ (ಕುಲಬ್ರಹ್ಮ) ಕೃಪೆಯಿಂದ ದೊರೆತವಳು ಸಿರಿ. ಸಂತಾನವಿಲ್ಲದ ಆಳ್ವ ದುಃಖಿಸುತ್ತಿದ್ದಾಗ ತಂಬೂರಿ ಹಿಡಿದ ಬ್ರಾಹ್ಮಣನ ರೂಪದಲ್ಲಿ ಬಂದ ದೈವ ಕುಲಬ್ರಹ್ಮ ದೇಗುಲದ ಜೀರ್ಣೋದ್ಧಾರ ಮಾಡಿದರೆ ಸಂತಾನಬಳ್ಳಿ ಚಿಗುರುತ್ತದೆ ಎಂಬ ನಿರೂಪ ಕೊಡುತ್ತದೆ. ಅದರಂತೆ ಮಾಡಹೊರಟಾಗ ಆಳ್ವ ಹೊದ್ದ ಹಚ್ಚಡ ಭಾರವಾಗಿ ಬಿಚ್ಚಿ ನೋಡಿದಾಗ ಎಳೆಯ ಅಡಿಕೆಯ ಹೊಂಬಾಳೆಯಲ್ಲಿ ಹಸುಕೂಸು ನಗುತ್ತಿರುತ್ತದೆ. ಅದೇ ಸತ್ಯನಾಪುರವ ಬೆಳಗಲಿರುವ ಸತ್ಯದ ಕೂಸು ಐಸಿರಿ ಸಿರಿಯಾಗಿರುತ್ತದೆ.

ಅಂದಿನಿಂದ ಸಿರಿ ಆಳ್ವನ ಕಣ್ಣಕೂಸಾಗಿ ಬೆಳೆಯುತ್ತದೆ. ಹತ್ತನೇ ವರ್ಷಕ್ಕೆ ಕಾಲಿಡುತ್ತಿದ್ದಂತೆಯೇ ಕಾಂತುಪೂಂಜನ ತಾಯಿ ಸಂಕರುಪೂಂಜೆದಿಯಿಂದ ವಿವಾಹದ ಪ್ರಸ್ತಾಪ ಬರುತ್ತದೆ. ಈಕೆಗೆ ಆಳ್ವರ ಆಸ್ತಿಪಾಸ್ತಿ ಕಣ್ಣು ಕುಕ್ಕಿ ಅದು ಸಿರಿಯಿಂದ ಐಸಿರಿಯಾಗಿ ಹರಿದುಬರುವುದು ಖುಷಿಯ ಸಂಗತಿ. ಆಳ್ವನಿಗೆ ಅವಳ ಮಗ ಕಾಂತುಪೂಂಜನ ವಕ್ರ ಬುದ್ಧಿ, ಅವನ ಹೆಣ್ಣು–ಹೊನ್ನಿನ ಮೋಹ ತಿಳಿದಿದ್ದರೂ ತನ್ನ ಸತ್ಯಲೋಕದ ಮಗಳು ಸಿರಿಯ ಮುಂದೆ ಅವೇನು ನಡೆಯಲಾರವು ಎಂಬ ನಂಬಿಕೆಯಿತ್ತು. ಸಿರಿಯ ಮದುವೆಯಾಗಿ ಗಂಡನ ಬಸರೂರ ಅರಮನೆಗೆ ಬರುತ್ತಾಳೆ. ಹಲವು ವ್ಯಸನಗಳನ್ನೊಳಗೊಂಡ ಆತ ಅವಳಿಗೆ ಸಮನಾದ ಗಂಡನಲ್ಲದಿದ್ದರೂ ಸಾಮಾನ್ಯ ಹೆಣ್ಣುಮಗಳಂತೆ ಅವನೊಂದಿಗೆ ಸಂಸಾರ ನಡೆಸುತ್ತಾಳೆ. ಗರ್ಭಿಣಿಯೂ ಆಗುತ್ತಾಳೆ. ಇಲ್ಲಿಂದ ಮುಂದೆ ಸಿರಿಯ ನಿಜವಾದ ವ್ಯಕ್ತಿತ್ವದ ಅನಾವರಣವಾಗುತ್ತದೆ.

ಮೊಮ್ಮಗಳು ಗರ್ಭಿಣಿಯಾದ ಸುದ್ದಿಯಿಂದ ಖುಷಿಯಾದ ಆಳ್ವ ಏಳು ತಿಂಗಳು ತುಂಬಿದ ನಂತರ ಕರದೊಯ್ಯಲು ಬರುತ್ತಾನೆ. ಬಯಕೆ ಶಾಸ್ತ್ರಕ್ಕಾಗಿ ಸೀರೆ ತರಲು ಹೋದ ಕಾಂತುಪೂಂಜ ಸೀರೆಕಟ್ಟಿನೊಂದಿಗೆ ಮನೆಗೆ ಮರಳದೆ ನೇರವಾಗಿ ಸೂಳೆ ಸಿದ್ದುವಿನ ಮನೆ ಬಾಗಿಲು ಬಡಿಯುತ್ತಾನೆ. ಅವಳು ಸೀರೆ ಕಿತ್ತುಕೊಂಡು ಉಟ್ಟು ತನ್ನೆದುರು ನಿಂತಾಗ ಅವಳ ವೈಯಾರಕ್ಕೆ ಮೈಮರೆಯುತ್ತಾನೆ. ಹೀಗೆ ಸೀರೆ ಪಾವಿತ್ರ್ಯ ಕಳೆದುಕೊಳ್ಳುತ್ತದೆ. ನಂತರ ಸಿರಿಯ ನೆನಪಾಗಿ ಸೀರೆ ಬಿಚ್ಚಿಸಿಕೊಂಡು ಮನೆಗೆ ತೆರಳುತ್ತಾನೆ.

ಸೀಮಂತದ ದಿನ ಬಸುರಿ ಹೆಣ್ಣಿಗೆ ಕೊಡುವ ಸೀರೆಯನ್ನು ಶಾಸ್ತ್ರಬದ್ಧವಾಗಿ ಅತ್ತೆ ಬೆಳ್ಳಿ ತಟ್ಟೆಯಲ್ಲಿಟ್ಟು ಸೊಸೆಯನ್ನು ಕರೆಯುತ್ತಾಳೆ. ಸಿರಿ ಅಪ್ಪಿತಪ್ಪಿಯೂ ಅತ್ತೆಯನ್ನು ನೋಡಲಿಲ್ಲ, ಸೀರೆಯನ್ನು ಪಡೆಯಲಿಲ್ಲ. ಅತ್ತೆಯೂ, ತಂದೆ ಆಳ್ವನೂ ಎಷ್ಟೆಲ್ಲ ಕೇಳಿಕೊಂಡರೂ ಅವಳು ತಟ್ಟೆಯೆಡೆಗೆ ಕೈಚಾಚಲಿಲ್ಲ. ಮಗಳ ಸತ್ಯದ ಅರಿವಿದ್ದ ಆಳ್ವ ಕಾರಣ ಕೇಳುತ್ತಾನೆ. 'ಸೂಳೆ ಉಟ್ಟ ಸೀರೆ ನಾನು ಉಡಲಾರೆ' ಎಂದು ಆ ಸೀರೆಯನ್ನು ತವರುಮನೆಯ ಕೆಲಸದ ಹೆಣ್ಣು ದಾರುವಿನತ್ತ ತೂರಿ ಮಡಿ ಕೆಟ್ಟ ಈ ಸೀರೆ ನಿನ್ನಲಿರಲಿ. ಮಗುವಿನ ತೊಟ್ಟಿಲು ಹೊರುವಾಗ ನಿನ್ನ ತಲೆಗೆ ಸಿಂಬೆಯಾಗಲಿ ಎಂದು ರೋಷದಿಂದ ಹೇಳುತ್ತಾ ಉಟ್ಟ ಸೀರೆಯಲ್ಲೇ ಶಾಸ್ತ್ರ ಮಾಡಿಸಿಕೊಂಡು ತವರಿಗೆ ಬರುತ್ತಾಳೆ.

ಊರ ಮುತ್ತೈದೆಯರು ಮಾಡಿದ ಆರತಿ ಶಾಸ್ತ್ರದೊಂದಿಗೆ ಗಂಡನ ಮನೆ ಬಿಟ್ಟು ತವರು ಮನೆಗೆ ಬಂದ ಸತ್ಯದ, ಸ್ವಾಭಿಮಾನಿ ಹೆಣ್ಣು ಸಿರಿ ಮುಂದೆ ಕೋಟಿಪೂಂಜನೆಂಬ ಮಗನಿಗೆ ಜನ್ಮ ನೀಡುತ್ತಾಳೆ. ಮುಂದೆ ಹೆಸರು ಮಾಡುವ ಈ ಮಗು ಅಜ್ಜನ ಮುಖ ನೋಡುವಂತಿಲ್ಲ. ನೋಡಿದರೆ ಅಜ್ಜನಿಗೆ ಸಾವು ಖಂಡಿತ ಎಂಬ ಭವಿಷ್ಯ ಕೇಳಿ ನಿರಾಸೆಯಾದರೂ ಮಗುವನ್ನು ನೋಡದೆಯೇ ಅಜ್ಜ ಮಗುವನ್ನು ಬೆಳೆಸುತ್ತಾನೆ. ಮುಂದೊಂದು ದಿನ ಮುಟ್ಟಾದ ಸಿರಿ ಸೂತಕದ ಸ್ನಾನಕ್ಕೆಂದು ಕೆರೆಗೆ ಹೋದಾಗ ಅಳುವ ಮಗುವನ್ನು ಸುಮ್ಮನಾಗಿಸಲು ಹೋದ ಆಳ್ವನ ಮರಣ ಸಂಭವಿಸಿಬಿಡುತ್ತದೆ.

ಗಂಡಾಳ್ವಿಕೆಯ ಪದ್ಧತಿಯಂತೆ ಸಂಬಂಧಿಯೊಬ್ಬ ತಾನು ಸತ್ಯನಾಪುರದ ವಾರಸುದಾರನೆಂದು ಕದನಕ್ಕೆ ನಿಂತಾಗ ಅವನನ್ನು ಓಡಿಸಿದ ಸಿರಿ ತಾನೇ ಆಳ್ವನ ಶವಸಂಸ್ಕಾರ ಮಾಡುತ್ತಾಳೆ. ಓಡಿಹೋದ ಸಂಬಂಧಿ ಸಿರಿಯ ಗಂಡನ ಸಹಕಾರದಿಂದ ನ್ಯಾಯ ಪಂಚಾಯತಿ ಮಾಡಿ ನ್ಯಾಯವನ್ನು ತನ್ನಕಡೆ ಮಾಡಿಕೊಳ್ಳುತ್ತಾನೆ.

'ಅವನಿಗೆ ಗಂಡಾಳ್ವಿಕೆಯ ವಾರಸುದಾರಿಕೆ, ತನಗೆ ಅಡುಗೆಮನೆಯ ಪಾರುಪತ್ಯ' ಎಂಬ ಗಂಡುಲೋಕದ ನ್ಯಾಯದ ವಿರುದ್ಧ, ಗಂಡನ ಮೋಸದ ಕೂಟದ ವಿರುದ್ಧ ಸಿಟ್ಟಿಗೆದ್ದ ಸಿರಿ ವಿಚ್ಛೇದನ ಕೇಳುತ್ತಾಳೆ. ಹಿಂದೆ ಹೇಳಿದಂತೆ ತನ್ನ ಬಯಕೆಯ ಸೀರೆಯನ್ನು ಸಿಂಬೆಯನ್ನಾಗಿಸಿ ತೊಟ್ಟಿಲನ್ನು ದಾರುವಿನಿಂದ ಹೊರೆಸಿಕೊಂಡು ಬಸರೂರ ಅರಮನೆಯಲ್ಲಿ ನಿಂತು ವಿಚ್ಛೇದನದ ತೆರ ಕೇಳುತ್ತಾಳೆ. ಕಾಂತುಪೂಂಜನ 'ಗಂಡನಿಲ್ಲದ ನೀನು ನಿನ್ನ ತವರಿನಿಂದ ಗಂಡುಕುಡಿಯನ್ನು ತಂದರೆ ತೆರ ಕೊಡುವೆ' ಎಂಬ ಗಂಡುಸೊಕ್ಕಿನ ಮಾತಿಗೆ, 'ನನ್ನ ಮಗನೇ ನನ್ನ ತವರಿನ ಗಂಡುಕುಡಿ ಎನ್ನುತ್ತಾಳೆ'. ತೆರವನ್ನು ಕೊಡದೆ ಕಾಡಿಸದ ಅವನ ಬಗ್ಗೆ ಸಿಟ್ಟುಗೊಂಡು ಇನ್ನು ಮುಂದಾದರೂ ಹೆಣ್ಣುಮಕ್ಕಳಿಗೆ ಹೀನ ಗಂಡನ ಗೋಳು ತಪ್ಪಬೇಕು, ಹೆಣ್ಣಿಗೆ ಎರಡನೇ ಮದುವೆಯಾಗುವ ಅವಕಾಶ ಬರಬೇಕು ಎಂಬ ಮಾತನ್ನಾಡುತ್ತಾಳೆ. ವಿಧಿಯ ಮಗಳಾದ ಅವಳು ಕೊಟ್ಟ ಕಾಟಗಳನ್ನು ಗೆದ್ದು ತನ್ನ ವಿಚ್ಛೇದನ ತಾನೆ ಪಡೆಯುತ್ತಾಳೆ.

ಸಿರಿಯ ಕತೆ ತುಳುನಾಡಿನಲ್ಲಿ ಜನಜನಿತವಾಗಿದೆ. ತುಂಬಿದ ಸಭೆಯಲ್ಲಿ ನ್ಯಾಯ ಕೇಳಿ ಅದನ್ನು ಪಡೆಯದೆ ವೀರಾಧಿವೀರರಾದ ಗಂಡಂದಿರಿದ್ದೂ ಅವಮಾನಕ್ಕೀಡಾದ ದ್ರೌಪದಿಯ ಕತೆ ಪ್ರಭುತ್ವದ ಎದುರು ಹೆಣ್ಣಿನ ಅಸಹಾಯಕತೆಯನ್ನು ಹೇಳುತ್ತದೆ. ಆದರೆ ತನಗೆ ಅವಮಾನಿಸಲೆಂದೇ ಗಂಡನೂ ಸೇರಿ ಪುರುಷರೆಲ್ಲ ತನ್ನೆದುರು ನಿಂತಾಗ ಏಕಾಂಗಿಯಾಗಿ ಹೋರಾಟ ಮಾಡಿ ಅವರಿಗೆ ಸರಿಸಾಟಿಯಾಗಿ ಬದುಕಿ ದೈವತ್ವಕ್ಕೇರಿದ ಸಿರಿಯ ಮಾದರಿಯೂ ನಮ್ಮ ಸಂಸ್ಕೃತಿಯಲ್ಲಿದೆ. ಎಷ್ಟಾದರೂ ನಿಯಮಾವಳಿಗಳು ನಮ್ಮ, ನಮ್ಮ ಅನುಕೂಲಕ್ಕೆ ತಕ್ಕಂತೆ ರೂಪುಗೊಂಡಿವೆಯಲ್ಲವೇ.

■ **ಅಮೃತಮತಿ**

## ಮಾತೇ ಮುತ್ತು

- ನಿಮ್ಮನ್ನು ಹಾಳು ಮಾಡುವ ಸಾಮರ್ಥ್ಯ ಬೇರೆ ಯಾರಿಗೂ ಇಲ್ಲ. ನಿಮ್ಮನ್ನು ಹಾಳು ಮಾಡುವ ಸಾಮರ್ಥ್ಯವಿರುವುದು ನಿಮಗೆ ಮಾತ್ರ.

  —ಸ್ವಾಮಿ ವಿವೇಕಾನಂದ

- ಯಶಸ್ಸಿನ ಗುಟ್ಟು ಏನು ಗೊತ್ತೆ? ಹಿಡಿದ ಕೆಲಸವನ್ನು ಬಿಡದಿರುವುದು.

  —ಗ್ಲೇಡರ್

- ಸಾವಿರಾರು ಟೊಳ್ಳು ಪದಗಳಿಗಿಂತ ಶಾಂತಿಯನ್ನು ಉಂಟು ಮಾಡುವ ಒಂದೇ ಶಬ್ದ ಸಾಕು.

  —ಗೌತಮ ಬುದ್ಧ

- ನದಿ ತೀರದಲ್ಲಿ ಮನೆ ಮಾಡುವುದಕ್ಕಿಂತ ಮೊಸಳೆ ಜೊತೆ ಸ್ನೇಹ ಮಾಡಿ.

  —ಗಾದೆ

- ಭಿನ್ನಾಭಿಪ್ರಾಯಗಳನ್ನು ತಳುಕು ಹಾಕಿ ಸ್ನೇಹವನ್ನು ಕಳೆದುಕೊಳ್ಳುವುದು ಸರಿಯಲ್ಲ.

  —ಚದುರಂಗ